ತೊಂದರೆ ಕಷ್ಟಗಳಿದೆ, ಇದನ್ನು ವಿಶೇಷವಾಗಿ ಪರೀಕ್ಷಿಸಿ ಸರಿಪಡಿಸಬೇಕು. ಇನ್ನು ಡೀಸೆಲ್ ಸಿಕ್ಕದೇ ಇರುವುದರಿಂದ ಹುಬ್ಬಳ್ಳಿ ಧಾರವಾಡ ಮಹಾನಗರದ ಮಧ್ಯೆ ಓಡಾಡುವ ಬಸ್‌ಗಳ ಸಂಖ್ಯೆ ಕಡಿಮೆಯಾಗಿ ಜನರಿಗೆ ಬಹಳ ತೊಂದರೆಯಾಗಿದೆ, ಆದ್ದರಿಂದ ಡೀಸೆಲ್ ಕೆಎಸ್‌ಆರ್‌ಟಿಸಿಗೆ ಆಗುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ:– ಸಚಿವರು ಸವಿಸ್ತಾರವಾಗಿ ಉತ್ತರಿಸಿದ್ದಾರೆ. ನಾನು ಸಚಿವರನ್ನು ಕೇಳುತ್ತೇನೆ ಎಷ್ಟು ಕಡೆ ಸರ್ಕಾರದ ಅಧಿಕಾರಿಗಳು ರೈಡ್ ಮಾಡಿ ಕ್ರಮ ತೆಗೆದುಕೊಂಡಿದ್ದಾರೆ ಅಥವಾ ಫುಡ್‌ನಲ್ಲೇ ಜಾಗೃತದಳ ಎಂದು ಇದೆ ಅವರು ಪೋಲೀಸರ ಜೊತೆ ಪೆಟ್ರೋಲ್ ಬಂಕ್‌ಗಳಿಗೆ ಹೋಗಿ ಹೆಚ್ಚಿನ ಬೆಲೆಗೆ ಪೆಟ್ರೋಲ್ ಮಾರುವುದು ಮತ್ತು ಸ್ಟಾಕಿದ್ದರೂ ಸ್ಟಾಕಿಲ್ಲ ಎಂದು ಬೋರ್ಡ್ ಹಾಕುವುದು ನಡೆದಿದೆ ಇವುಗಳ ಮೇಲ ಕೇಸ್ ಫೈಲ್ ಮಾಡಿದ್ದೀರಾ?

ಶ್ರೀ ಬಿ.ಎಚ್. ಬನ್ನಿಕೋಡ್ :– ಸಚಿವರ ಉತ್ತರ ಕೊಟ್ಟದ್ದು ಕೇಳಿದರೆ ಸರ್ಕಾರ ಒಳ್ಳೆಯ ಪ್ರಯತ್ನ ನಡೆಸಿದೆ ತೃಪ್ತಿತರುವಂಥಾದ್ದೆಂದು ಹೇಳಿದರು ಮತ್ತು ವಿತರಣೆಯಲ್ಲಿ ಎಲ್ಲಿ ಅಕ್ರಮ ನಡೆದಿದೆ ಎಂದು ತಿಳಿಸಿದರೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು ಆದರೆ ವಾಸ್ತವವಾಗಿ ಏನು ನಡೆದಿದೆ ಎಂದು ನೋಡಿದರೆ ಬಹಳ ವ್ಯತ್ಯಾಸ ಇದೆ. ಒಂದು ಉದಾಹರಣೆ ಹೇಳುವೆನು. ಬ್ಯಾರೆಲ್‌ಗಳಲ್ಲಿ ಬಂದ ಸೀಮೆ ಎಣ್ಣೆ ರೀಟೇಲ್ ಅಂಗಡಿಗಳಿಗೆ ಹೋಗಲೇ ಇಲ್ಲ ಏಪ್ರಿಲ್ ತಿಂಗಳಿಂದ ಇಲ್ಲಿಯವರೆಗೆ 36 ಸಾವಿರ ಲೀಟರ್ ಎಣ್ಣೆ ಹಿರೇಕೆರೂರು ತಾಲ್ಲೂಕಿಗೆ ಕೊಟ್ಟರೆ ಇವತ್ತಿಗೂ ಒಂದು ಲೀಟರನ್ನೂ ಜನರಿಗೆ ಹಂಚಿಲ್ಲ ತಾಲ್ಲೂಕು ಸಮಿತಿಯಲ್ಲಿ ಸರ್ವಾನು ಮತದಿಂದ ನಿರ್ಣಯ ತೆಗೆದುಕೊಂಡು ಕಳಿಸಿದರೂ ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ :– ಶ್ರೀ ಸಾಂಡ್ರ ಅವರು ಮಂಡ್ಯ ಬೆಂಗಳೂರು ಮೈಸೂರು ಕಡೆ ಮಾತ್ರವಲ್ಲ ಉತ್ತರ ಕರ್ನಾಟಕದ ಭಾಗದಲ್ಲೂ ಸಮಸ್ಯೆ ಇದೆಯೆಂದು ಹೇಳಿದ್ದಾರೆ ನಾನು ದೆಹಲಿ ಯಾತ್ರೆ ನಂತರ ವಾಪಸ್ ಬಂದ ಮೇಲೆ ಪ್ರತಿಜಿಲ್ಲೆಯಲ್ಲೂ ಪ್ರವಾಸ ಮಾಡುತ್ತೇನೆ ಆಯಾ ಶಾಸಕರೊಡನೆ ಸಮಾಲೋಚನೆ ನಡೆಸಿ ಅಧಿಕಾರಿಗಳ ಕೈಯಿಂದ ಎಲ್ಲಿ ಏನು ಮಾಡಬೇಕೋ ಅದನೆಲ್ಲ ಮಾಡುವೆನು. ಇನ್ನು ಕೃಷ್ಣಪ್ಪನವರು ಒಂದು ಪ್ರಶ್ನೆ ಎತ್ತಿದರು ಈ ಇಲಾಖೆಗೆ ಪ್ರತ್ಯೇಕ ಜಾಗೃತದಳ ಇದೆ ಅದಕ್ಕಾಗಿ ಒಬ್ಬ ಸೀನಿಯರ್ ಐಪಿಎಸ್ ಅಧಿಕಾರಿ ಇದ್ದಾರೆ ಅವರು ಎಷ್ಟು ಅಕ್ರಮ ದಾಸ್ತಾನುಗಾರರನ್ನು ಹಿಡಿದಿದ್ದಾರೆಂದು ಕೇಳಿದರು ನಿಜಕ್ಕೂ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ನಾನು ಅಧಿಕಾರ ವಹಿಸಿಕೊಂಡ ತಕ್ಷಣ ಅವರನ್ನೆಲ್ಲ ಕರೆದು ನೀವು ಕೇಳಿದ್ದನ್ನೇ ಕೇಳಿದೆ. ಕಳ್ಳಸಂತೆಕಾರರು ಮತ್ತು ಅಕ್ರಮದಾಸ್ತಾನುಗಾರರನ್ನು ಹಿಡಿದು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚಾರ ಕೊಟ್ಟರೆ ತಡೆಯಬಹುದು, ಆಮೇಲೆ ಅಂಥ ವ್ಯಕ್ತಿಗಳನ್ನು ನೇಷನಲ್ ಸೆಕ್ಯುರಿಟಿ ಆಕ್ಟ್ ಪ್ರಕಾರ ಹಿಡಿದುಹಾಕಿದರೆ ಬೆಲೆ ಕೆಳಕ್ಕೆ ಇಳಿಯುವುದೆಂದು ಹೇಳಿದೆ. ಆ ಚಿಂತನೆ ನನಗೂ ಇದೆ. ಸ್ವಲ್ಪ ಕಾದು ನೋಡಿ. ಅದಕ್ಕಾಗಿ ವಾಟಾಳ್‌ರವರ ಸಹಕಾರ ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ವಿಶೇಷವಾಗಿ ನನ್ನ ಸಹಕಾರ ನಿಮಗೇಕೆ ಬೇಕೋ ಗೊತ್ತಿಲ್ಲ.

ಖಾಸಗಿ ಕಾರ್ಯಕಲಾಪಗಳು

ಖಾಸಗಿ ಸದಸ್ಯರ ವಿಧೇಯಕದ ಮಂಡನೆ

1990ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಮಸೂದೆ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಪೆರಕಲ್ ಎಂ.ಮಲ್ಲಪ್ಪ :– ಸನ್ಮಾನ್ಯ ಉಪಸಭಾಧ್ಯಕ್ಷಣೆಯವರೆ, ನಾನು 1990ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಮಸೂದೆಯನ್ನು ಮಂಡಿಸಲು ಸಭೆಯ ಅನುಮತಿಯನ್ನು ಕೋರುತ್ತೇನೆ.

ಉಪಸಭಾಧ್ಯಕ್ಷಣೆಯವರು :– ಪ್ರಸ್ತಾವನೇನೆಂದರೆ, "1990ನೇ ಇಸವಿಯ ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿಯನ್ನು ನೀಡಲಾಯಿತು.

ಶ್ರೀ ಪೆರಕಲ್ ಎಂ. ಮಲ್ಲಪ್ಪ :– ಸನ್ಮಾನ್ಯ ಉಪಸಭಾಧ್ಯಕ್ಷಣೆಯವರೆ, ನಾನು "1990ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ."

ಉಪಸಭಾಧ್ಯಕ್ಷಣೆಯವರು :– ವಿಧೇಯಕವನ್ನು ಮಂಡಿಸಲಾಯಿತು.